# ಅರಿಯೆ ಅರಿವು

ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ 'ಅರಿವು ಸಾಮಾನ್ಯವೇ?' ಎಂದು ಹೇಳಿಕೊಂಡಿದ್ದಾರೆ. ಅರಿವನ್ನು ಅರಿಯುವ ಇಂಥ 'ಕ್ರಮಗಳ ಹುಡುಕಾಟ' ಬಲು ಹಿಂದಿನಿಂದಲೂ ಉಂಟು. ಅನೇಕ ಜಿಜ್ಞಾಸುಗಳು ಅದರ ಬೆನ್ನನ್ನು ಹತ್ತಿದ್ದಾರೆ. ವಚನಕಾರರಲ್ಲಿ ಒಂದಲ್ಲ ಒಂದು ವಚನದಲ್ಲಿ ಅರಿವಿನ ಜಿಜ್ಞಾಸೆ ಬಂದಿದೆ. ಆದರೆ, ಎಲ್ಲರೂ 'ಅರಿವಿನ ವಿಸ್ತಾರ'ಕ್ಕೆ ಬೆರಗಾಗಿದ್ದಾರೆ; ಹುಡುಕಾಟವನ್ನು ನಡೆಸಿದ್ದಾರೆ! ವಚನಕಾರರಿಗಿಂತ ಮುಂಚೆ ಉಪನಿಷತ್ತಿನ ಕಾಲದಲ್ಲೂ ಅರಿವಿನ ಬಗೆಗೆ ಚರ್ಚೆ ನಡೆದದ್ದುಂಟು. ಉಪನಿಷತ್ತುಗಳಲ್ಲಿ 'ಪ್ರಜ್ಞಾನಂ ಬ್ರಹ್ಮ' ಎಂಬ ಮಾತಿನಲ್ಲಿ ಈ ವಿಷಯವನ್ನು ಕೈವಾರಿಸಿದ್ದುಂಟು. ಇದು ಅಮೂರ್ತತ್ವದ ಉಪಾಸನೆ. 'ಪ್ರಜ್ಞಾನ' ಎಂಬ ಮಾತೇ 'ಅರಿವು' ಎಂಬುದಕ್ಕೆ ಸಂವಾದಿಯಾದ ಪದ. ಇದು ಮಾಂಡೂಕ್ಯ ಉಪನಿಷತ್ತಿನಲ್ಲಿ ಬರುತ್ತದೆ. 'ಪ್ರಜ್ಞಾ' ಎಂಬ ನೆಲೆಯಲ್ಲಿ ಇದನ್ನು ಬಲು ವಿಸ್ತಾರವಾಗಿ ಋಷಿಗಳು ಹೇಳಿದ್ದಾರೆ. ಅಲ್ಲಿ ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ತುರೀಯಾ ಈ ನಾಲ್ಕು ಅವಸ್ಥೆಗಳ ವಿವರಣೆ ಬಂದಿದೆ. ಇದು ಕನ್ನಡದಲ್ಲಿ ಎಚ್ಚರ, ಕನಸು, ತನಿನಿದ್ರೆ ಮತ್ತು ತುರೀಯಾ ಎಂದು ವ್ಯವಹರಿಸುವುದುಂಟು. ಮೊದಲ ಮೂರು ಅವಸ್ಥೆಗಳು ಲೌಕಿಕರಿಗೂ ನಾಲ್ಕನೆಯ 'ತುರೀಯಾ' ಅವಸ್ಥೆ ಯೋಗಿಗಳಿಗೂ ಅನ್ವಯಿಸಿ ಹೇಳಲಾಗಿದೆ!

ಅರಿವು ಎಂಬುದಕ್ಕೆ ಜ್ಞಾನ, ಪ್ರಜ್ಞಾನ, ವಿಜ್ಞಾನ ಎಂಬ ನೆಲೆಯಲ್ಲೂ ಚರ್ಚಿತವಾಗಿದೆ. ಆದರೆ, ಕನ್ನಡದ 'ಅರಿವು' ಉಳಿದೆಲ್ಲ ಮಾತಿಗಿಂತ ಭಾವದಲ್ಲಿಯೂ ಅನುಭಾವದಲ್ಲಿಯೂ ಮೇಲ್ತರಗತಿಯಲ್ಲಿ ಕುಳಿತಿದೆ. 'ಅರಿಯೆ ಅರಿವು' ಎಂಬುದೊಂದು ಕನ್ನಡದ ಮಾತಿದೆ. ಇಲ್ಲಿ ಬಂದಿರುವ 'ಅರಿಯೆ' ಎಂಬುದಕ್ಕೆ ತಿಳಿಯಲು ಯಾರು ಪ್ರಯತ್ನಿಸುವರೋ ಅವರಿಗೆ 'ಅರಿವು' ತಿಳಿಯ ಬಲ್ಲದು! ಇದು ಜಡಮತಿಗಳಿಗಲ್ಲ; ಮಂದಮತಿಗಳಿಗೂ ಅಲ್ಲ! ತಿಳಿಯಬೇಕೆಂಬ ಹಂಬಲವುಳ್ಳವರಿಗೆ ಅರಿವಿನ ವಿಸ್ತಾರವನ್ನು ತಿಳಿಯಲು ಸಾಧ್ಯ ಎಂಬ ಸೂಚಿತಾರ್ಥ ಇಲ್ಲುಂಟು. ಅವಸ್ಥಾತ್ರಯಗಳ ಮೂಲಕ ಅರಿವನ್ನು ಅರಿಯುವ ಯತ್ನ ಮಾಡಬಹುದಷ್ಟೆ. ಬರಿಯ ಅರಿವು ಬೇರೆ ಬೇರೆ ರೂಪಗಳನ್ನು ತಾಳುತ್ತದೆ. ಇದು ಕಾರ್ಯ ಕಾರಣ ಭಾವದಿಂದಲೇ ತಿಳಿಯಬೇಕಾಗಿಲ್ಲ. ಆದರೆ, ಅರಿವಿನ ವಿವರ್ತವೇ ಎಚ್ಚರ (ಜಾಗ್ರತ್) ಕನಸು (ಸ್ವಪ್ನ)ಗಳು. ಇವುಗಳಲ್ಲಿ ತಲೆದೋರುವುದೇ ಅರಿವಿನ ಪ್ರಪಂಚ. ಹೀಗಾಗಿ, ಅರಿವೇ ಎಲ್ಲಾ ರೂಪದಿಂದ ವಿವರ್ತ ಆಗುವುದು ನಿಶ್ಚಿತ. ಆದುದರಿಂದ ಅರಿವಿಗೆ ಯಾವ ಕಳಂಕವೂ ಇಲ್ಲವೆಂದು ಇದರಿಂದ ಸಿದ್ಧಗೊಳ್ಳುತ್ತದೆ! ನಾವು ಅರಿವಿನ ವ್ಯಾವಹಾರಿಕಸತ್ತೆಯನ್ನು ಮೊದಲು ತಿಳಿಯೋಣ. ನಾವು ಕಣ್ಣು, ಕಿವಿ, ಮೂಗು, ಮಾತು ಮತ್ತು ನಾಲಗೆ ಈ ಇಂದ್ರಿಯಗಳಿಂದ ಲೋಕವನ್ನು ಗ್ರಹಿಸುತ್ತೇವಷ್ಟೆ. ಕಣ್ಣು, ಕಿವಿ, ಮೂಗು ಮತ್ತು ನಾಲಗೆ ಈ ಸ್ಥಾನಗಳಲ್ಲಿ ಹೃದಯ ಹಾಗೂ ಮನಸ್ಸು ಕಾಣಿಸಿಕೊಳ್ಳುತ್ತದೆ. ಇದು ಮನಸ್ಸಿನ ವೃತ್ತಿಗಳ ಮೂಲಕ ಉಪಾಧಿಗಳಿಂದ ತೋರಿಕೊಳ್ಳುವ ವಿಷಯಗಳೆಂಬ ಅರಿವು! ಇದನ್ನು ಪೂರ್ವಿಕರು 'ಸಂಜ್ಞಾನ' ಎಂಬ ಮಾತಿನಿಂದ ವಿವರಿಸಲು ಕೆಲವೊಮ್ಮೆ ಯತ್ನಿಸಿದ್ದರು. ಈ ಅರಿವಿಗೆ ನಾನು ಸ್ವತಂತ್ರ ಎಂಬ ಅಭಿಮಾನ ಬರುವುದುಂಟು. ಇದು 'ಅಜ್ಞಾನ' ಎಂಬ ಮಾತಿನಿಂದ ತಿಳಿಯಲು ಯತ್ನಿಸಿದ ಪ್ರಯತ್ನವಾಗಿದೆ. ನಮ್ಮ ಸಮಾಜದಲ್ಲಿ ಕಲಾಕೌಶಲ್ಯ ಉಂಟಷ್ಟೆ. ಇದೂ ಕೂಡ ಒಂದು ಬಗೆಯ ಅರಿವು ಎನಿಸಿಕೊಳ್ಳುತ್ತದೆ. ನಮ್ಮ ಪೂರ್ವಿಕರು 'ವಿಜ್ಞಾನ' ಎಂಬ ಮಾತಿನ ಮೂಲಕ ಇದನ್ನು ವಿವರಿಸಲು ಯತ್ನಿಸಿದ್ದಾರೆ. ನಾನು ಇದನ್ನು ಚೆನ್ನಾಗಿ ತಿಳಿದೆ ಎಂಬುದೂ ಕೂಡ ಅರಿವೆ! ಇದು 'ಪ್ರಜ್ಞಾನ' ಎಂಬ ಮಾತಿನಿಂದ ವಿವರಿಸಿಕೊಳ್ಳಲಾಗಿದೆ.

ನಾವು ಪ್ರತಿನಿತ್ಯ ಹತ್ತಾರು ಗ್ರಂಥಗಳನ್ನು ಓದುತ್ತೇವಷ್ಟೆ. ಅಲ್ಲಿ ಬರುವ ವಿಷಯಗಳನ್ನು ನೆನಪಿಟ್ಟುಕೊಳ್ಳುವ ಅರಿವೊಂದುಂಟು. ಇದನ್ನು ಹಿಂದಿನವರು 'ಮೇಧಾ' ಎಂದು ಕರೆದರು. ನಮ್ಮನಮ್ಮ ಇಂದ್ರಿಯಗಳಿಂದ ವಿಷಯಗಳನ್ನು ಅರಿಯುತ್ತೇವೆ. ಇದು 'ದೃಷ್ಟಿ' ಎಂಬ ಮಾತಿನ ಅರಿವಾಗಿದೆ. ಶರೀರೇಂದ್ರಿಯಗಳನ್ನು ಕುಸಿಯದಂತೆ ಇಟ್ಟುಕೊಂಡಿರುವ ಅರಿವೂ ಒಂದುಂಟು. ಇದು 'ಧೃತಿ' ಎಂಬ ಅರಿವಿನ ಅವಸ್ಥೆಯಾಗಿದೆ. ನಮ್ಮಲ್ಲಿ ವಿಚಾರ ರೂಪವಾದ ಅರಿವಿದೆ. ಇದನ್ನು 'ಮತಿ' ಎಂಬ ಮಾತಿನಿಂದ ಹಿರೀಕರು ವ್ಯಾಖ್ಯಾನಿಸಿದ್ದಾರೆ. ಇನ್ನು ವಿಚಾರ ಮಾಡುವ ಕರ್ತೃತ್ವದ ಅರಿವೊಂದುಂಟು. ಇದು 'ಮನೀಷಾ' ಎಂಬ ಮಾತಿನಿಂದ ಕರೆದಿದ್ದಾರೆ. ನಮಗೆ ಇದ್ದಕ್ಕಿದ್ದಂತೆ ವ್ಯಥೆಯನ್ನು ಅನುಭವಿಸಬೇಕಾಗುತ್ತದೆ. ಅದೊಂದು ಬಗೆಯ ಅರಿವುಂಟು. ಇದಕ್ಕೆ 'ಜೂತಿ' ಎಂದು ಕರೆದಿದ್ದಾರೆ. ನಾವು ಸದಾ ನೆನಪಿನ ಕೊಳದಲ್ಲಿ ವಿಹರಿಸುತ್ತಿರುತ್ತೇವೆ. ಅದುವೇ 'ಸ್ಮೃತಿ'. ಕೆಲವೊಮ್ಮೆ ಇದು ಬಿಳುಪು; ಇದು ಕಪ್ಪು ಎಂದು ಬಿಡಿಸಿ ತಿಳಿದುಕೊಳ್ಳುವ ಅರಿವುಂಟು. ಇದು 'ಸಂಕಲ್ಪ' ಎಂಬ ಮಾತಿನಿಂದ ಬಳಕೆಯಾಗಿದೆ. ಇದು ಆಗಲೇ ಬೇಕೆಂದು ನಿಶ್ಚಯ ಮಾಡುವ ಅರಿವುಂಟಷ್ಟೆ. ಇದು 'ಕ್ರತು' ಎಂಬ ಮಾತಿಗೆ ಸಂವಾದಿ. ನಾವು ಬದುಕಿರುವುದಕ್ಕಾಗಿ ಮಾಡುವ ಕೃತಿಗಳು ಅಲ್ಲಿ ತೋರಿಕೊಳ್ಳುವ ಅರಿವು ಒಂದುಂಟು. ಇದು 'ಅಸು' ಎಂಬ ಪದದಿಂದ ಹಿಂದಿನವರು ಕರೆದಿದ್ದಾರೆ! ಇನ್ನು ಬಯಕೆಯೂ ಒಂದು ಅರಿವೆಯೇ ಸರಿ. ಇದು 'ಕಾಮ' ಎಂಬ ಪದದಿಂದ ಸಂಕೇತವಾಗಿದೆ. ಇನ್ನು ಬೆರೆಯುವುದು ಅರಿವಿನ ಮತ್ತೊಂದು ಬಗೆ. ಇದು 'ವಶ' ಎಂಬ ಮಾತಿನಿಂದ ಬಳಕೆಯಾಗಿದೆ!

ಇವೆಲ್ಲವೂ ಐತರೇಯೋಪನಿಷತ್ತಿನಲ್ಲಿ ಬಂದಿರುವ ಅರಿವಿನ ಹೆಸರುಗಳಾಗಿವೆ. ಅಲ್ಲಿಯೇ ಹೇಳಿರುವಂತೆ ಬ್ರಹ್ಮ, ಇಂದ್ರ, ಪ್ರಜಾಪತಿ ದೇವತೆಗಳಾಗಲಿ; ಪಂಚಭೂತಗಳಾಗಲಿ; ಚರಾಚರ ಪ್ರಾಣಿಗಳಾಗಲಿ ಎಲ್ಲಾ ಅರಿವೇ ಎಂದು ಉದ್ಘೋಷಿಸಲಾಗಿದೆ.

ಅಲ್ಲಮಪ್ರಭು ಇವನ್ನೆಲ್ಲಾ ತಿಳಿದಮೇಲೆ 'ಅರಿವು ಸಾಮಾನ್ಯವೇ?' ಎಂದು ಪ್ರಶ್ನಾರ್ಥಕವಾಗಿ ಹೇಳಿ; ಇದರ ಅಗಾಧತೆಯನ್ನು ಒಂದೇ ನುಡಿಯಲ್ಲಿ ನಮ್ಮ ಮುಂದಿರಿಸಿದ್ದಾರೆ. 'ಅರಿದೆವು, ಅರಿದೆವು' ಎಂಬ ಅಪಲಾಪಗಳು ಹಿಂದೆಯೂ ಬಂದಿದ್ದವು; ಈಗಲೂ ಬರುತ್ತಿವೆ. ಆದರೆ, ಇದನ್ನು ತಿಳಿಯುವ ದಾರಿ ಕಾಣದೆ ನಾವು ಅರ್ಧದಾರಿಯಲ್ಲಿ ನಿಂತಿದ್ದೇವೆ.

■ ಪುರಂಜೀವಿ

## ಮಾತೇ ಮುತ್ತು

- ಯಾವುದನ್ನು ನಾವು ಪಡೆಯಲೇಬಾರದೋ ಅದನ್ನೇ ನಾವು ಹೆಚ್ಚು ಅಪೇಕ್ಷಿಸುತ್ತೇವೆ.
  —ಪಿ. ಸೈರಸ್
- ಹಣವನ್ನು ನಂಬಿಕೆ ಇರುವವರಲ್ಲಿ ಇಡು, ಆದರೆ ಹಣದ ಮೇಲೆ ನಂಬಿಕೆ ಇಡಬೇಡ.
  —ಆಲಿವರ್ ವೆಂಡಲ್ ಹೋಮ್ಸ್
- ಕತ್ತಲಿಗೆ ಹೆದರುವ ಮಗುವನ್ನು ಕ್ಷಮಿಸಬಹುದು, ಬೆಳಕಿಗೆ ಹೆದರುವ ಹಿರಿಯರನ್ನು ಕ್ಷಮಿಸಲು ಆಗದು.
  —ಪ್ಲೇಟೊ
- ಎಚ್ಚರಗೊಳ್ಳಬೇಕಾದ ದಿನ ಇಂದು ಬಂದಿದೆ.
  —ಗೌತಮ ಬುದ್ಧ
- ಅನುಭವ ಬಂದಹಾಗೆಲ್ಲ ಜಗತ್ತು ಅರ್ಥವಾಗುತ್ತದೆ.
  —ಕನ್‌ಫ್ಯೂಷಿಯಸ್
- ಬೋಧಿಸುವುದಕ್ಕಿಂತ ಕಲಿಯುವಂತೆ ಮಾಡುವುದು ಮುಖ್ಯ.
  —ಸಾಕ್ರೆಟೀಸ್
- ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತ ನಾಶಪಡಿಸು.
  —ಸ್ವಾಮಿ ವಿವೇಕಾನಂದ
- ಮಾನವ ತಾನು ದೊಡ್ಡವನಾಗದೆ, ತನ್ನ ದೇವರನ್ನು ದೊಡ್ಡದು ಮಾಡಲಾರ.
  —ಶಿವರಾಮ ಕಾರಂತ
- ಹೇಳಿದ ಮಾತನ್ನು ಪರೀಕ್ಷಿಸು, ಹೇಳಿದ ಮನುಷ್ಯನನ್ನು ಅಲ್ಲ.
  —ಅರಬ್ಬಿ ಗಾದೆ